## ಕಾವೇರಿತು; ಕಾವೇರಿ ಮೂಲೆ ಸೇರಿತು!

ಈಚೆಗೆ ನಡೆದ ಕಾವೇರಿ ಪ್ರತಿಭಟನಾ ಸರಣಿಯನ್ನು ಪ್ರಸಾರ ಮಾಡಿದ ಕನ್ನಡದ ಮತ್ತು ಆಂಗ್ಲ ಸುದ್ದಿವಾಹಿನಿಗಳು ಪ್ರತಿಭಟನಾಕಾರರ ಗಲಾಟೆ, ಅಬ್ಬರ, ವಿವಿಧ ಬಂದ್‌ಗಳ ಸುದೀರ್ಘ ವರದಿಗಳನ್ನು ಪದೇ ಪದೇ ತೋರಿಸಿದವು. ಆದರೆ ಕಾವೇರಿ ವಿವಾದದ ಆಳಕ್ಕಿಳಿದು ಜನಜಾಗೃತಿಯನ್ನುಂಟು ಮಾಡುವ ಕೆಲಸ ನಡೆಯಲಿಲ್ಲ. ಕಾವೇರಿ ನೀರು ಹಂಚಿಕೆಯ ಸಾಧಕ ಬಾಧಕಗಳು, ಪ್ರಸ್ತುತ ವಿಷಮ ಪರಿಸ್ಥಿತಿ, ಸಮಸ್ಯೆಗೆ ಶಾಶ್ವತ ಪರಿಹಾರ ಮುಂತಾದ ವಿಷಯಗಳನ್ನೆತ್ತಿಕೊಂಡು, ಅಧ್ಯಯನಶೀಲವೂ, ವೈಜ್ಞಾನಿಕವೂ, ನ್ಯಾಯಯುತವೂ ಮತ್ತು ಕಾರ್ಯಸಾಧ್ಯವೂ ಆಗಬಲ್ಲಂತಹ ಪರಿಹಾರೋಪಾಯಗಳನ್ನು ಅಂಕಿ– ಅಂಶ, ದೃಶಾವಳಿ ಮತ್ತು ತಜ್ಞರ ಅಭಿಪ್ರಾಯಗಳ ರೂಪದಲ್ಲಿ ಪ್ರಸಾರ ಮಾಡಬಹುದಿತ್ತು.

ಎಲ್ಲೋ ಒಂದೆರಡು ವಾಹಿನಿಗಳು ಈ ನಿಟ್ಟಿನಲ್ಲಿ ಮೇಲು ಮೇಲಿನ ಯತ್ನ ಮಾಡಿದ್ದನ್ನು ಬಿಟ್ಟರೆ ಆಳವಾದ ಮತ್ತು ಗಂಭೀರ ಪ್ರಯತ್ನವನ್ನು ಯಾವ ವಾಹಿನಿಯೂ ಮಾಡಲಿಲ್ಲ. ಬದಲಿಗೆ, ಟಿಆರ್‌ಪಿ ದಾಹಕ್ಕೆ ಬಲಿಯಾದ ಕೆಲವು ವಾಹಿನಿಗಳು ಯಾವ ಮಟ್ಟಕ್ಕಿಳಿದವೆಂದರೆ, ಪ್ರಚೋದನೆ ನೀಡುವ ರೀತಿಯಲ್ಲಿ ವರ್ತಿಸಿದವು. ಸ್ಪರ್ಧೆ ಮತ್ತು ಟಿಆರ್‌ಪಿಗಳ ಜೊತೆಗೆ ಸಾಮಾಜಿಕ ಹೊಣೆಗಾರಿಕೆಯೂ ಇರುತ್ತದೆ ಎಂಬುದನ್ನು ನಮ್ಮ ಸುದ್ದಿವಾಹಿನಿಗಳು ಅರಿತು ಅದರಂತೆ ಸಾಗಬೇಕಾದ್ದು ಇಂದಿನ ತುರ್ತು ಅಗತ್ಯ.

–ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

## ತಲೆ ತಿನ್ನುವ ಪುಟ್ಟಗೌರಿ

ಕಿರುತೆರೆ ನೊಂದ ಮನಸ್ಸಿಗೆ ಮನರಂಜನೆ, ಸಮಾಧಾನ, ಹೊಸ ಹುರುಪನ್ನು ಒದಗಿಸಬೇಕು. ಅದಕ್ಕೆ ವ್ಯತಿರಿಕ್ತವಾಗಿ 'ಪುಟ್ಟ ಗೌರಿ' ಬಾಲ್ಯವಿವಾಹದಿಂದ ಶುರುವಾಗಿ ಅಮಾಯಕ ಹೆಣ್ಣಿನ ಮೋಸದ ವಿಚ್ಛೇದನ, ಅಪಹರಣ, ವಿಷಪ್ರಾಶನ, ಜೀವಂತ ಸಮಾಧಿ, ತಾಯಿಯ ಅಕಾಲಿಕ ಮರಣ, ಅಪ್ಪನ ರಕ್ತಪಾತದವರೆಗೆ ಮುಂದುವರಿದು ವೀಕ್ಷಕರ ಮನಸ್ಸನ್ನು ಹಿಂಡಿ ಹಾಕಿದೆ. ಅನೇಕ ಅಸಂಬದ್ಧ ತಿರುವುಗಳನ್ನು ಪಡೆದು ನಂಬಲಾರದಂತಹ ಘಟನೆಗಳೊಂದಿಗೆ ಮುಂದುವರಿಯುತ್ತಿದೆ. ಆದರೂ ಈ ಧಾರಾವಾಹಿ ಕೊನೆಯಾಗುವ ಸೂಚನೆ ಕಾಣುತ್ತಿಲ್ಲ.

ಈ ರೀತಿ ಚಿತ್ರಹಿಂಸೆ ಕೊಟ್ಟರೆ ವೀಕ್ಷಕರ ಗತಿ ಏನು? ನಿರ್ಮಾಪಕ, ನಿರ್ದೇಶಕ ಮಹಾಶಯರೆ, ಸಮಾಜದ ಬಗ್ಗೆ ನಿಮಗೂ ಜವಾಬ್ದಾರಿ ಇದೆ ಎಂಬುದನ್ನು ಮರೆಯದಿರಿ. ನಿಮ್ಮ ಕಾರ್ಯಕ್ರಮಗಳು ವೀಕ್ಷಕರ ಮೇಲೆ ಪರಿಣಾಮ ಬೀರುತ್ತವೆ. ಹೀಗಾಗಿ ಒಳ್ಳೆಯ ಚಿಂತನೆಗಳು, ಸಂದೇಶಗಳನ್ನು ಹೊಂದಿರುವ ಕಥೆಗಳ ಧಾರಾವಾಹಿ ತಯಾರಿಸಿ.

ಶ್ರೀನಾಥ್ ಕೊನೇಟಿ, ಬೆಂಗಳೂರು

ವಾರದ ಪತ್ರ

## ಕನ್ನಡ ಚಾನೆಲ್‌ಗಳ ಪರಭಾಷಾ ವ್ಯಾಮೋಹ?

ಕರ್ನಾಟಕದಲ್ಲಿ ಕನ್ನಡೇತರ ಚಿತ್ರಗಳ ಆರ್ಭಟದ ಬಗೆಗೆ ಗಂಭೀರ ಚಿಂತನೆ ಮತ್ತು ಆಕ್ರೋಶ ನಡೆಯುತ್ತಿರುವಂತೆ, ಕನ್ನಡದ ನ್ಯೂಸ್ ಚಾನೆಲ್‌ಗಳಲ್ಲಿ ಕನ್ನಡೇತರ ಚಿತ್ರಗಳ ಮುಖ್ಯವಾಗಿ ತೆಲುಗು, ತಮಿಳು ಮತ್ತು ಹಿಂದಿ ಚಿತ್ರಗಳ ಪ್ರಮೋಷನ್ ಎಲ್ಲೆ ಮೀರುತ್ತಿದೆ. ಹಾಗೆಯೇ ಪರಭಾಷಾ ನಟ–ನಟಿಯರ ವೈಭವೀಕರಣ ಕೂಡಾ ಲಂಗುಲಗಾಮಿಲ್ಲದೆ ಪ್ರಸಾರವಾಗುತ್ತದೆ. ಬಹುತೇಕ ಕನ್ನಡಿಗರಿಗೆ ಇವರ ಮುಖ ಪರಿಚಯವೂ ಇರುವುದಿಲ್ಲ. ಇನ್ನೊಂದೆರಡು ಚಾನೆಲ್‌ಗಳು ಸಂಜೆಯಾದೊಡನೆ ಹಿಂದಿ ಚಾನೆಲ್‌ಗಳಲ್ಲಿ ಈ ಹಿಂದೆ ನಡೆದ ಸಂಗೀತ ನೃತ್ಯ ಕಾರ್ಯಕ್ರಮಗಳನ್ನು ಮರು ಪ್ರಸಾರ ಮಾಡುತ್ತವೆ.

ಈ ಪ್ರಕ್ರಿಯೆ ಲಾಗಾಯ್ತಿನಿಂದ ನಡೆಯುತ್ತಿದ್ದರೂ, ಇತ್ತೀಚಿನ ದಿನಗಳಲ್ಲಿ ಕನ್ನಡ ಟಿವಿ ವೀಕ್ಷಕರ ತಾಳ್ಮೆಯನ್ನು ಕೆದುಕುವಷ್ಟು ಜೋರಾಗಿದೆ. ಈ ಪರಭಾಷಾ ನುಸುಳುವಿಕೆ ಬಾಹುಬಲಿ ಎನ್ನುವ ತೆಲುಗು ಚಿತ್ರ ಬಿಡುಗಡೆಯ ದಿನಗಳಲ್ಲಿ ಅತಿ ವೇಗ ಪಡೆದಿದ್ದು, ಕಬಾಲಿ ತಮಿಳು ಚಿತ್ರ ಬಿಡುಗಡೆಯ ದಿನಗಳಲ್ಲಿ ತಾರಕಕ್ಕೇರಿ ಕನ್ನಡಿಗರು ಕನ್ನಡ ಟಿವಿ ಚಾನೆಲ್‌ಗಳ ಭಾಷಾ ಬದ್ಧತೆಯನ್ನು ಪ್ರಶ್ನಿಸುವಂತಾಗಿದೆ. ಕನ್ನಡಿಗರು ಭಾಷಾ ದ್ವೇಷಿಗಳಲ್ಲ. ಆದರೆ ಇನ್ನೊಂದು ಭಾಷೆಯನ್ನು ಆರಾಧಿಸುವಾಗ, ಇದು one side ಆಗದೇ reciprocal ಆಗಬೇಕು ಎನ್ನುವುದು ಅವರ ಇಚ್ಛೆ. ಕಲೆಗೆ, ಸಂಗೀತಕ್ಕೆ ಮತ್ತು ಚಲನಚಿತ್ರಗಳಿಗೆ ಭಾಷೆಯ ಗಡಿ ಇರಬಾರದು ಎನ್ನುವ ದೊಡ್ಡಮಾತು ಕೇವಲ ಕನ್ನಡಿಗರಿಗೆ ಮತ್ತು ಕನ್ನಡ ಭಾಷೆಗೆ ಸೀಮಿತವಾಗಬಾರದು. ಕನ್ನಡೇತರ ಟಿವಿ ಚಾನೆಲ್‌ಗಳು ಕನ್ನಡಿಗರ, ಕನ್ನಡದ ಮತ್ತು ಕನ್ನಡ ಚಲನಚಿತ್ರಗಳ ಕಾರ್ಯಕ್ರಮಗಳನ್ನು ಪ್ರಸಾರ ಮಾಡಿದ ದಾಖಲೆ ಇದೆಯೇ? ಇದು ಕನ್ನಡ ಚಾನೆಲ್‌ಗಳ ದೊಡ್ಡ ಮನಸ್ಸಿನ, ಭಾಷಾ ಸೌಹಾರ್ದತೆಯ ಉದಾಹರಣೆಯೋ ಅಥವಾ ವಾಣಿಜ್ಯ ಆಸಕ್ತಿಯೋ?

ರಮಾನಂದ ಶರ್ಮಾ, ನವದೆಹಲಿ

## ಜಾಳು ಧಾರಾವಾಹಿಗಳು

ಆರಂಭದಲ್ಲಿ ಉತ್ತಮ ಹಂದರವುಳ್ಳ ಕಥೆಯನ್ನು ಹದಿಮೂರು ಎಪಿಸೋಡ್‌ಗಳಿಗಾಗಿ ಆಯ್ದು ಧಾರಾವಾಹಿಯ ನಿರ್ಮಾಣ ಆರಂಭಿಸಿದವರು ಸ್ವಲ್ಪ ಮಟ್ಟಿನ ಹೊಗಳಿಕೆ ಮಾಧ್ಯಮಗಳಲ್ಲಿ ಬಂದೊಡನೆ ಆ ಧಾರಾವಾಹಿಯ ಮೂಲಕಥೆಯ ಉದ್ದೇಶವನ್ನೇ ಮಣ್ಣು ಪಾಲು ಮಾಡುತ್ತಿರುವುದು ಸಾಮಾನ್ಯವಾಗಿಬಿಟ್ಟಿದೆ. ಆ ಧಾರಾವಾಹಿಯು ಈ ರೀತಿ ಬದಲಾದರೂ ಅದನ್ನು ನಿರಂತರ ನೋಡುವ ಹವ್ಯಾಸ ಇಟ್ಟುಕೊಂಡವರಿಂದಲೇ ಅರ್ಥಹೀನ ಧಾರಾವಾಹಿಗಳು ಹೆಚ್ಚಾಗಲು ಕಾರಣವಿರಬಹುದು.

ಕೋಟೀಶ್ವರ ಸೂರ್ಯನಾರಾಯಣರಾವ್, ಬೆಂಗಳೂರು

## ಕ್ರೈಂ ಟಿ ವಿ!

ಆಗ ಉದಯದಲ್ಲಿ ಕ್ರೈಂ ಸ್ಟೋರಿ, ಈಟಿವಿಯಲ್ಲಿ ಕ್ರೈಂ ಡೈರಿ ಪ್ರಸಾರವಾಗುತ್ತಿದ್ದವು. ಈಗ ಕಲರ್ಸ್ ಕನ್ನಡದಲ್ಲಿ ಪ್ರಸಾರವಾಗುತ್ತಿರುವ ಧಾರಾವಾಹಿಗಳೆಲ್ಲವೂ ಕ್ರೈಂ ಸ್ಟೋರಿ ಮತ್ತು ಕ್ರೈಂ ಡೈರಿಗಳೇ! ಒಟ್ಟಿನಲ್ಲಿ ಕಲರ್ಸ್ ಕನ್ನಡ ವಾಹಿನಿ ಈಗ ಕ್ರೈಂ ಟಿ.ವಿ ಆಗಿದೆ ಎನ್ನಬಹುದು.

ಪಿ. ಜೆ. ರಾಘವೇಂದ್ರ, ಮೈಸೂರು

## ಅದ್ಭುತ 'ಹರ ಹರ..

ಇತ್ತೀಚೆಗೆ ಕನ್ನಡ ಚಿತ್ರಂಗದಲ್ಲಿ ಪುರಾಣ ಕಥೆಗಳು ಅಪರೂಪವಾಗುತ್ತಿದ್ದು, ಸದ್ಯ ಸ್ಟಾರ್ ಸುವರ್ಣದ 'ಹರ ಹರ ಮಹಾದೇವ' ಧಾರಾವಾಹಿ ಮುದ ನೀಡುತ್ತಿದೆ. ಪಾತ್ರ ಹಂಚಿಕೆ, ವಸ್ತ್ರಾಲಂಕಾರ, ಅದ್ಭುತ ಸೆಟಿಂಗ್ಸ್, ಮನಮುಟ್ಟುವ ಅಭಿನಯ ಎಲ್ಲವೂ ಚೆನ್ನಾಗಿವೆ. ಮುಖ್ಯ ಪಾತ್ರಗಳೆನಿಸಿದ ಶಿವ ಮತ್ತು ಸತಿ ಪಾತ್ರಧಾರಿಗಳು ಘನತೆ, ಗಾಂಭೀರ್ಯದಿಂದ ನಟಿಸಿದ್ದು, ದಿಗ್ದರ್ಶನವಂತೂ ಹಿಂದಿ ಚಿತ್ರಗಳನ್ನು ಮೀರಿಸುವಂತಿದೆ.

ಎಸ್.ಸತ್ಯನಾರಾಯಣ ಶ್ರೇಷ್ಠಿ, ಅಜ್ಜಂಪುರ

## ನವರಸಗಳ ಡ್ರಾಮಾ..

ಝೀ ಕನ್ನಡ ಚಾನೆಲ್‌ನಲ್ಲಿ ಶನಿವಾರ, ರವಿವಾರ ಡ್ರಾಮಾ ಜ್ಯೂನಿಯರ್ಸ್ ಚೆನ್ನಾಗಿ ಮೂಡಿಬರುತ್ತಿದೆ. ತೀರ್ಪುಗಾರರು, ನಾಟಕ ಮಾಡಿಸುವವರು ಎಲ್ಲರೂ ಚೆನ್ನಾಗಿ ಕನ್ನಡದಲ್ಲೇ ಮಾತನಾಡುತ್ತಾರೆ. ಮಕ್ಕಳಂತೂ ನಗಿಸಿ, ಅಳಿಸಿ ನವರಸಗಳಿಂದ ಜನರನ್ನು ಸಮ್ಮೋಹನಗೊಳಿಸುತ್ತಿದ್ದಾರೆ. ಇಂತಹ ಕಾರ್ಯಕ್ರಮಗಳು ಟಿವಿಯಲ್ಲಿ ಹೆಚ್ಚುಹೆಚ್ಚಾಗಿ ಬರಲಿ.

–ರುಕ್ಮಿಣಿ ಕೃ. ದೇಶಪಾಂಡೆ, ಗೋಕಾಕ

## ಅಸಹಜ 'ಕಿನ್ನರಿ'

ಕಲರ್ಸ್‌ನ ಕಿನ್ನರಿಯಲ್ಲಿನ ಮಣಿಗೆ ಮತ್ತೊಬ್ಬ ಸುಳ್ಳು ಮತ್ತು ಕುಡುಕ ತಂದೆ, ಹಣಕ್ಕಾಗಿ ಬಾಯ್ಬಿಡುವ ಜಗಳಗಂಟಿ ತಾಯಿ ಇವರುಗಳು ಬೇಕಿತ್ತೇ? ಮಣಿಯ ಹೊಸ ಪೋಷಕರ ಮನೆ ಇರುವುದು ಕೊಳಚೆ ಪ್ರದೇಶದಲ್ಲಿ. ಆದರೆ ಅವರು ವಾಸಿಸುವ ಮನೆ ಮೇಲ್ಪಟ್ಟದ ಮಧ್ಯಮ ವರ್ಗದವರ ಮನೆಗಿಂತಲೂ ಚೆನ್ನಾಗಿದೆ. ಕೇವಲ ಮೂರು ಜನರಿರುವ ಮನೆಯಲ್ಲಿ ಅಡುಗೆಗೆ ಉಪಯೋಗಿಸುವ ಮತ್ತು ಮಣಿ ತೊಳೆಯುವ ಪಾತ್ರೆಗಳೆಲ್ಲವೂ ಹೋಟೆಲ್ ಪಾತ್ರೆಗಳಷ್ಟೇ ದೊಡ್ಡದು. ಮಣಿಯ ವಯಸ್ಸಿಗೆ ಮೀರಿದ ಮಾತು, ನಡವಳಿಕೆಗಳೆಲ್ಲವೂ ಅಸಹಜ. ದಯವಿಟ್ಟು ಕಿನ್ನರಿಗೆ ಅಂತ್ಯ ಹಾಡಲಿ.

–ಶಾಂತಾ ನಾಗರಾಜ್. ಕೆ., ಬೆಂಗಳೂರು